

# ಬದುಕು ಕಲಿಸಿದ ಗೋಡೆ ಚಿತ್ತಾರ

**ರಾಹುಲ ಬೆಳಗಲಿ**

‘ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರ ನೇಮಕಾತಿ ಆಗುತ್ತಿಲ್ಲ. ಮಕ್ಕಳಿಗೆ ಚಿತ್ರಕಲೆ ಕುರಿತು ಯಾರೂ ಪಾಠ ಮಾಡುತ್ತಿಲ್ಲ. ಅದರ ಮಹತ್ವವನ್ನು ಯಾರೂ ಗ್ರಹಿಸುತ್ತಿಲ್ಲ’ ಎಂಬ ತಕರಾರು ಚಿತ್ರಕಲಾ ಶಿಕ್ಷಕರು ಮತ್ತು ಚಿತ್ರಕಲಾವಿದರದ್ದು. ‘ಚಿತ್ರಕಲೆ ಗೊತ್ತಿದ್ದರೆ ಮತ್ತು ವೈವಿಧ್ಯಮಯ ಬಣ್ಣಗಳ ಅರಿವಿದ್ದರೆ, ಮಕ್ಕಳ ಕಲಿಕೆ ಸುಧಾರಿಸುತ್ತದೆ. ಇದು ವ್ಯಕ್ತಿತ್ವ ವಿಕಸನಕ್ಕೆ ಪೂರಕ ಆಗುವುದರ ಜೊತೆಗೆ ಶಾಲಾ ಪರೀಕ್ಷೆಗಳ ಫಲಿತಾಂಶವು ಸುಧಾರಿಸುತ್ತದೆ. ಅದಕ್ಕೆ ಚಿತ್ರಕಲಾ ಶಿಕ್ಷಣ ಕಡ್ಡಾಯಗೊಳಿಸಿ’ ಎಂಬ ಬೇಡಿಕೆ ಅವರದ್ದು.

ಶಿಕ್ಷಣ ತಜ್ಞರು ಇಂಥದ್ದೇ ಅಭಿಪ್ರಾಯ ವ್ಯಕ್ತಪಡಿಸಿದರೂ ಸರ್ಕಾರಗಳಿಂದ ನಿರೀಕ್ಷಿತ ಸ್ಪಂದನೆ ಸಿಕ್ಕಿಲ್ಲ. ಇದರಿಂದ ಬಹುತೇಕರು ನಿರಾಸೆಗೊಂಡಿದ್ದಾರೆ. ಧ್ವನಿ ಎತ್ತುವುದು ಕಡಿಮೆ ಮಾಡಿದ್ದಾರೆ. ಆದರೆ, ಅವರ ಸಾಲಿನಲ್ಲಿ ಸೇರಲು ಚಿತ್ರಕಲಾವಿದೆ ರೂಬಲ್ ನಾಗಿ ಇಷ್ಟಪಡಲಿಲ್ಲ. ಚಿತ್ರಕಲೆಯನ್ನೇ ಮಕ್ಕಳಿರುವ ಕಡೆ ಕರೆದೊಯ್ದರು. ನಾಲ್ಕು ಗೋಡೆಗಳ ಕೊಠಡಿಯೊಳಗೆ ಪಾಠ ಮಾಡುವ ಬದಲು, ಕಟ್ಟಡದ ಹೊರಗಡೆ ವಿಶಾಲವಾದ ಗೋಡೆಗಳ ಮೇಲೆ ಚೆಂದದ ಮತ್ತು ಪರಿಣಾಮಕಾರಿ ಕಲಾಕೃತಿಗಳನ್ನು ರಚಿಸಿ, ಅಲ್ಲಿಯೇ ಶಾಲಾ ತರಗತಿಗಳನ್ನು ಆರಂಭಿಸಿದರು. ಎಂದಿಗೂ ಶಾಲೆಗೆ ಹೋಗದ ಮಕ್ಕಳು, ಕೂತಲ್ಲೇ ಮತ್ತು ನಿಂತಲ್ಲೇ ಕಲಿಕೆಯತ್ತ ಆಸಕ್ತರಾದರು. ಬದುಕಿನ ಹೊಸ ವ್ಯಾಖ್ಯಾನ ಕಂಡುಕೊಂಡರು.

ರೂಬಲ್ ನಾಗಿ ಅವರು ಬಿ.ಇಡಿ. ಕಲಿತು, ಪೂರ್ಣಪ್ರಮಾಣದಲ್ಲಿ ಶಿಕ್ಷಕಿಯಾದವರಲ್ಲ. ಅವರು ಅಪ್ಪಟ ಚಿತ್ರಕಲಾವಿದೆ. ಗೋಡೆ ಬರಹ, ಕಲಾಕೃತಿಗಳನ್ನು ರಚಿಸುವಲ್ಲಿ ನಿಷ್ಣಾತರು. ಜಮ್ಮು–ಕಾಶ್ಮೀರದಲ್ಲಿ 1980ರ ಜುಲೈ ತಿಂಗಳಲ್ಲಿ ಜನಿಸಿದ ಅವರು ಓದಿದ್ದು ರಾಜ್ಯಶಾಸ್ತ್ರ. ಲಂಡನ್‌ನಲ್ಲಿ ಕಲೆಯನ್ನು ಅಧ್ಯಯನ ಮಾಡಿದರು. ತಾವು ಕಲಿತ ಕಲೆಯು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಸದ್ಬಳಕೆ ಆಗಬೇಕು ಎಂಬ ಹಂಬಲ ಅವರದ್ದು. ಅದಕ್ಕಾಗಿ ಮೂವತ್ತು ವರ್ಷಗಳಿಂದ ಅವರು ಶ್ರಮಿಸುತ್ತಿದ್ದು, ಮುಂಬೈ ಕೊಳೆಗೇರಿ ಪ್ರದೇಶಗಳ ಮುದ್ದು ಮಕ್ಕಳಿಗೆ ಅಚ್ಚುಮೆಚ್ಚಿನ ಶಿಕ್ಷಕಿ ಆಗಿದ್ದಾರೆ.

ತಮ್ಮ ಹೆಸರಿನಲ್ಲಿ ಕಲಾ ಪ್ರತಿಷ್ಠಾನ (ಆರ್‌ಎನ್‌ಎಫ್) ಮತ್ತು ಡಿಸೈನ್ ಸ್ಟುಡಿಯೊ (ಆರ್‌ಎನ್‌ಡಿಎಸ್) ಸ್ಥಾಪಿಸಿರುವ ರೂಬಲ್ ಅವರು, ಅದರ ಮೂಲಕ ಮಕ್ಕಳಿಗೆ ಶಿಕ್ಷಣ ನೀಡುವ ಕಾರ್ಯದಲ್ಲಿ ನಿರತರಾಗಿದ್ದಾರೆ. 800ಕ್ಕೂ ಹೆಚ್ಚು ಕಡೆ ಗೋಡೆಗಳ ಮೇಲೆ ಕಲಾಕೃತಿಗಳನ್ನು ರಚಿಸಿದ್ದಾರೆ. 150ಕ್ಕೂ ಹೆಚ್ಚು ಕಡೆ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ಮುಂಬೈನ ಸೌಂದರ್ಯವನ್ನು ವೃದ್ಧಿಸಲು ಪ್ರಯತ್ನಿಸುತ್ತಿರುವ ಇಂಡಿಯಾ ಡಿಸೈನ್ ಕೌನ್ಸಿಲ್‌ನ (ಐಡಿಸಿ) ಸದಸ್ಯೆಯಾಗಿ, ಅಲ್ಲಿನ ಕೊಳೆಗೇರಿ ಪ್ರದೇಶಗಳ ಮನೆ ಮತ್ತು ಕಟ್ಟಡಗಳಿಗೆ ಬಗೆಬಗೆಯ ಬಣ್ಣಗಳನ್ನು ಹಚ್ಚಿದ್ದಾರೆ. ಕಂಗಳಿಗೆ ಹಿತಾನುಭವ ನೀಡುವ ವರ್ಣಗಳ ಮೂಲಕ ಜೀವ ತುಂಬಿದ್ದಾರೆ.

ಏಷ್ಯಾದಲ್ಲೇ ದೊಡ್ಡ ಕೊಳೆಗೇರಿ ಪ್ರದೇಶ ಎಂದು ಪರಿಗಣಿಸಲ್ಪಡುವ ಧಾರಾವಿ ಸ್ಲಂನಲ್ಲೇ ಹೆಚ್ಚು ಸಮಯ ಕಳೆಯುವ ರೂಬಲ್ ಅವರು ತಮ್ಮ ಸಂಸ್ಥೆಯ ಮುಖಾಂತರ ಬಾಲವಾಡಿ ಕೇಂದ್ರಗಳನ್ನು ತೆರೆದು, ಚಿತ್ರಕಲೆಗಳ ಮೂಲಕ ಮಕ್ಕಳಿಗೆ ಶಾಲಾ ಶಿಕ್ಷಣದತ್ತ ಪ್ರೇರೇಪಿಸಿದ್ದಾರೆ. ಬರೀ ಅಕ್ಷರಗಳನ್ನು ಕಲಿತರೆ ಸಾಲದು, ಶುಚಿತ್ವ ಕಾಪಾಡಿಕೊಳ್ಳಬೇಕು ಮತ್ತು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂಬುದನ್ನು ತಿಳಿ ಹೇಳುತ್ತಾರೆ. ಹೆಚ್ಚೆಂದರೆ 24 ಮಕ್ಕಳನ್ನು ಸೇರಿಸಿ, ಸಣ್ಣದಾಗಿ ಆರಂಭಿಸಿದ ಕಲಿಕಾ ಕೇಂದ್ರದ ಸಂಖ್ಯೆ ಈಗ 800ರ ಗಡಿ ದಾಟಿದೆ. ಶಿಕ್ಷಣವು ಹೆಚ್ಚು ಹೆಚ್ಚು ವಿಸ್ತಾರಗೊಳ್ಳುತ್ತಿದೆ.

ಕಲಿಕಾ ಕೇಂದ್ರದಲ್ಲಿನ ಬಹುತೇಕ ಮಕ್ಕಳು ದಯನೀಯ ಸ್ಥಿತಿಯಲ್ಲಿರುವವರು, ಬಡವರು, ಶೋಷಣೆಗೆ ಒಳಗಾದವರು. ಚಿತ್ರಕಲೆಯನ್ನೇ ಜೀವಾಳ ಆಗಿಸಿಕೊಂಡಿರುವ ಅವರು, ಅದರ ಮೂಲಕ ಶಿಕ್ಷಣದ ಹಾದಿಯಲ್ಲಿ ನಡೆಯತೊಡಗಿದ್ದಾರೆ. ಅದರ ಮೂಲಕವೇ ಸಮಾಜ, ಗಣಿತ, ಇಂಗ್ಲಿಷ್ ಸೇರಿದಂತೆ ವಿವಿಧ ವಿಷಯಗಳನ್ನು ಕಲಿಯುವುದರಲ್ಲಿ ನಿರತರಾಗಿದ್ದಾರೆ. ಗೋಡೆಗಳ ಮೇಲಿನ ಬರಹಗಳು ಮತ್ತು ಕಲಾಕೃತಿಗಳು ಅವರ ಬದುಕಿನ ಮೇಲೆ ಪ್ರಭಾವ ಬೀರುತ್ತಿವೆ. ಹೊಸ ಆಲೋಚನೆಗಳನ್ನು ಮೂಡಿಸಿಕೊಳ್ಳಲು ಕಾರಣವಾಗಿದೆ. ಈ ಶಿಕ್ಷಣ ಕ್ರಾಂತಿ ಹೆಚ್ಚು ಸದ್ದಿಲ್ಲದೇ ನಡೆಯುತ್ತಿದೆ.

ಹೆಚ್ಚು ಪ್ರಚಾರ ಬಯಸದೇ, ದೈನಂದಿನ ಕಾರ್ಯಗಳಲ್ಲಿಯೇ ಸಂತೃಪ್ತರಾದ ರೂಬಲ್ ನಾಗಿ ಅವರು ಇದೇ ವರ್ಷ ಫೆಬ್ರುವರಿ 6ರಂದು ದುಬೈಯಲ್ಲಿ ‘ಜೆಮ್ಸ್ ಜಾಗತಿಕ ಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ’ಗೆ ಪಾತ್ರರಾದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ‘ಈ ಪ್ರಶಸ್ತಿಯನ್ನು ದೇಶಕ್ಕೆ ಮತ್ತು ಮಕ್ಕಳ ಶಿಕ್ಷಣಕ್ಕೆ ಅರ್ಪಿಸುತ್ತೇನೆ. ಪ್ರಶಸ್ತಿಯ ನಗದನ್ನು ಕಲಿಕಾ ಕೇಂದ್ರವನ್ನು ಇನ್ನಷ್ಟು ಸುಧಾರಿಸಲು ಮತ್ತು ಮಕ್ಕಳಿಗೆ ಇನ್ನಷ್ಟು ಶೈಕ್ಷಣಿಕ ಸೌಲಭ್ಯ ಕಲ್ಪಿಸಲು ವಿನಿಯೋಗಿಸುತ್ತೇನೆ. ಮಕ್ಕಳು ಶಿಕ್ಷಣ ಪಡೆದುಕೊಂಡಷ್ಟು ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳುತ್ತಾರೆ’ ಎಂದರು.

ಇನ್ನೊಂದು ವಿಷಯ. ನೀವು ಅವರನ್ನು ಭೇಟಿಯಾಗಬೇಕಿದ್ದರೆ, ಮುಂಬೈನ ಧಾರಾವಿ ಮತ್ತು ಸುತ್ತಮುತ್ತಲ ಕೊಳೆಗೇರಿ ಪ್ರದೇಶಕ್ಕೆ ಹೋದರೆ ಸಾಕು. ‘ಮಿಸಾಲ್ ಮುಂಬೈ’ ಎಂಬ ಯೋಜನೆಯಡಿ ಅವರು ಮತ್ತು ಸಂಗಡಿಗರು ಮುಂಬೈನ ಕೊಳೆಗೇರಿ ಪ್ರದೇಶಗಳನ್ನು ವರ್ಣಮಯಗೊಳಿಸುವ ಕಾರ್ಯದಲ್ಲಿ ನಿರತರಾಗಿರುತ್ತಾರೆ. ಈ ಎಲ್ಲದಕ್ಕೂ ಮುನ್ನ ಅವರೇ ರಚಿಸಿರುವ ‘ದಿ ಸ್ಲಂ ಕ್ವೀನ್’ ಎಂಬ ಕಲಾಕೃತಿಯನ್ನು ಓದಿ. ಅದರಲ್ಲಿ ಅವರು ಕಲಾಕೃತಿಗಳು ಮಾಡಿರುವ ಪ್ರಭಾವದ ಬಗ್ಗೆ ಮುಕ್ತವಾಗಿ ಬರೆದುಕೊಂಡಿದ್ದಾರೆ.

ಕಲಾಕೃತಿಗಳನ್ನು ರಚಿಸಲು ಕಾಗದ, ಶಾಂತ ವಾತಾವರಣ, ಬೆಟ್ಟ ಗುಡ್ಡ, ಕಾಡು ಇರಬೇಕು ಎಂದೇನಿಲ್ಲ. ಕೈಗಳು ಚಾಚುವಷ್ಟು ಮತ್ತು ಕಲ್ಪನೆ ವಿಸ್ತಾರ ಆಗುವಷ್ಟು ದೊಡ್ಡದಾದ ಗೋಡೆಗಳಿದ್ದರೆ ಸಾಕು. ಬದುಕಿನ ಬಣ್ಣ ಅರಳುತ್ತದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65